# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 03-09-2022 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು.**

1. ಶ್ರೀ ಉಮೇಶ್. ಅಧ್ಯಕ್ಷರು. ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು.
2. ಶ್ರೀ ಹೆಚ್.ಎ.ಕೃಷ್ಣಾರೆಡ್ಡಿ. ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು.
3. ಶಾಹೀನಾ. ವೈದ್ಯಾಧಿಕಾರಿಯವರ ಕಛೇರಿ. ವಾರ್ಡ್ ಸಂಖ್ಯೆ.29. ಕಾಚರಕನಹಳ್ಳಿ.
4. ಶ್ರೀಮತಿ ವಿನುತ. ಸದಸ್ಯರು.
5. ಶ್ರೀ ಪಿಳ್ಳಪ್ಪ (ಅಧ್ಯಕ್ಷರು. ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)
6. ಶ್ರೀ ಸುಬ್ರಮಣಿ. ಸ್ಥಳೀಯರು.

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರವಿ. ಕಂದಾಯ ನಿರೀಕ್ಷಕರು.
2. ಶ್ರೀ ರಾಜೇಶ್. ಕಿರಿಯ ಆರೋಗ್ಯ ನಿರೀಕ್ಷಕರು.
3. ಮಾರ್ಷಲ್. ವಾರ್ಡ್ ಸಂಖ್ಯೆ.29. ಕಾಚರಕನಹಳ್ಳಿ.
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ.
5. ಶ್ರೀ ಮುಟ್ಟುಸ್ವಾಮಿ. ಬೆಸ್ಕಾಂ ಇಲಾಖೆ.
6. ಶ್ರೀಮತಿ ರಾಜೇಶ್ವರಿ. ಕಲ್ಯಾಣ ಇಲಾಖೆ.
7. ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ. ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

**1) ಘನತ್ಯಾಜ್ಯ ನಿರ್ವಹಣೆ:-**

ಶ್ರೀಮತಿ ವಿನುತ, ಸದಸ್ಯರು, ರವರು **ಮಾತನಾಡಿ,** ವಾರ್ಡ್ ಪ್ರದೇಶದಲ್ಲಿ ಸಾರ್ವಜನಿಕರು ಕಸವನ್ನು ಆಟೋ ಟಿಪ್ಪರ್‌ಗಳಿಗೆ ನೀಡದೇ ಎಲ್ಲೆಂದರಲ್ಲಿ ಎಸೆಯುತ್ತಿರುತ್ತಾರೆ ಮತ್ತು ಖಾಲಿ ನಿವೇಶನಗಳಲ್ಲಿ ತ್ಯಾಜ್ಯಗಳನ್ನು ಎಸೆಯುತ್ತಿರುತ್ತಾರೆ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ನಿರೀಕ್ಷಕರು ಮಾರ್ಷಲ್‌ಗಳ ಸಹಾಯದಿಂದ ಗಾರ್ಬೇಜ್ ಎಸೆಯುವವರನ್ನು ಪತ್ತೆ ಹಚ್ಚಿ ದಂಡವನ್ನು ವಿಧಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ ಎಲ್ಲಾ ಆಟೋ ಟಿಪ್ಪರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿರುತ್ತದೆ ಮತ್ತು ಎಲ್ಲಾ ಪೌರಕಾರ್ಮಿಕರಿಗೆ ಸುರಕ್ಷತಾ ಸಲಕರಣೆಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿರುತ್ತದೆ ಹಾಗೂ ಮದ್ಯಾಹ್ನ ಬಿಸಿಯೂಟ ವ್ಯವಸ್ಥೆ ಇದ್ದು, ನೀರು, ಶೌಚಾಲಯ ವ್ಯವಸ್ಥೆ ಕೂಡ ಇರುತ್ತದೆ ಎಂದು ಸಭೆಗೆ ತಿಳಿಸಿದರು.

2) **ಬೀದಿ ದೀಪಗಳ ನಿರ್ವಹಣೆ:-**

**ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ,** ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿ ಯಲ್ಲಿ ಎಲ್ಲಾ ಪ್ರದೇಶದಲ್ಲಿ ಬೀದಿ ದೀಪಗಳು ಇದ್ದು ಸಮರ್ಪಕವಾಗಿ ಉರಿಯುತ್ತಿರುತ್ತವೆ ಆದರೆ ಹಲವು ಸ್ಥಳಗಳಿಗೆ ಹೊಸ ಬೀದಿಗಳ ಫಿಟ್ಟಿಂಗ್ಸ್ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮುಂದಿನ ಸಭೆಯಲ್ಲಿ ವಿದ್ಯುತ್ ದೀಪಗಳ ವಿಭಾಗದವರಿಂದ ಮಾಹಿತಿ ಪಡೆದು ತೀರ್ಮಾನಿಸಲಾಗುವುದು ಎಂದು ಸಭೆಗೆ ತಿಳಿಸಿದರು.

3) **ಬೃಹತ್ ನೀರುಗಾಲುವೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

4) **ಆರೋಗ್ಯ ಇಲಾಖೆ:-**

**ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ,** ಫಾಗಿಂಗ್ ಬಗ್ಗೆ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ಮಾತನಾಡಿ, ಈಗಾಗಲೇ ಫಾಗಿಂಗ್ ಮಾಡಲಾಗುತ್ತಿದ್ದು, ಮತ್ತಷ್ಟು ಅವಧಿಯನ್ನು ವಿಸ್ತರಿಸಲಾಗುವುದೆಂದು ಸಭೆಗೆ ತಿಳಿಸಿದರು. ನಂತರ ಮಾತನಾಡಿ ಪ್ಲಾಸ್ಟಿಕ್ ಬಳಕೆ ನಿಷೇಧದ ಬಗ್ಗೆ ಕ್ರಮ ಕೈಗೊಂಡಿದ್ದು, ಆಗಸ್ಟ್ ಮಾಹೆಯಲ್ಲಿ 22000/- ದಂಡವನ್ನು ವಸೂಲಾತಿ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

5) **ಕಾಮಗಾರಿ ಇಲಾಖೆ:-**

ಎಲ್ಲಾ ಸದಸ್ಯರು ಮಾತನಾಡಿ ಕಮ್ಮನಹಳ್ಳಿ ಮುಖ್ಯರಸ್ತೆ, ಪಾದಾಚಾರಿ ಮಾರ್ಗದಲ್ಲಿ ಒತ್ತುವರಿಯಾಗಿರುವುದನ್ನು ತೆರವುಗೊಳಿಸುವ ಬಗ್ಗೆ ಪ್ರಸ್ತಾಪಿಸಿದಾಗ, ಈ ಬಗ್ಗೆ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ, ಸಹಾಯಕ ಅಭಿಯಂತರರು ಪೋಲೀಸರ ಸಹಕಾರದೊಂದಿಗೆ ಕಮ್ಮನಹಳ್ಳಿ ಮುಖ್ಯರಸ್ತೆಯ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

6) **ಕಂದಾಯ ಇಲಾಖೆ:-** ಅಧ್ಯಕ್ಷರ ಅಪ್ಪಣೆ ಮೇರೆಗೆ ಕಂದಾಯ ವಿಭಾಗದ ಅಧಿಕಾರಿಗಳು ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ನೀಡಿದರು. ಮತದಾರರ ಪಟ್ಟಿಯನ್ನು ಎಲ್ಲಾ ಸದಸ್ಯರು ಕೂಲಂಕುಷವಾಗಿ ಪರಿಶೀಲಿಸಿದರು. ನಂತರ ಕಂದಾಯ ಇಲಾಖಾಧಿಕಾರಿಗಳು ಮಾತನಾಡಿ, ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಇನ್ನು ಒಂದು ವಾರದ ಅವಧಿ ಕಾಲ ವಿಸ್ತರಿಸಲಾಗಿದೆ ಮತ್ತು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸಾರ್ವಜನಿಕರು ಆಧಾರ್ ಲಿಂಕ್ ಮಾಡಬೇಕಾಗಿರುತ್ತದೆ. ಇದಕ್ಕಾಗಿ 6(ಬಿ) ಫಾರಂ ಅನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ನಂತರ ಯಾವುದೇ ನ್ಯೂನ್ಯತೆ ಇದ್ದಲ್ಲಿ ಸ್ಥಳೀಯ ಕಂದಾಯ ಇಲಾಖೆಯನ್ನು ಸಂಪರ್ಕಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

7) **ಉದ್ಯಾನವನಗಳ ವಿಭಾಗ:-**

**ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ,** ಇತ್ತೀಚಿನ ದಿನಗಳಲ್ಲಿ ಉದ್ಯಾನವನಗಳಲ್ಲಿ ದಿನಂಪೂರ್ತಿ ತೆರೆದಿರುವುದರಿಂದ ಉದ್ಯಾನವನಗಳಲ್ಲಿ ಸಮಾಜಘಾತುಕ ವ್ಯಕ್ತಿಗಳು ಅನೈತಿಕ ಚಟುವಟಿಕೆಗಳನ್ನು ಮಾಡುತ್ತಿರುವುದಾಗಿ, ಸಭೆಗೆ ತಿಳಿಸಿ, ಈ ಮೊದಲಿನಂತೆ ಬೆಳಿಗ್ಗೆ 6-00 ರಿಂದ 10-00 ಗಂಟೆಯ ವರೆಗೆ ಸಂಜೆ 5.00 ರಿಂದ 7.30 ವರೆಗೆ ಉದ್ಯಾವನಗಳಲ್ಲಿ ಸಾರ್ವಜನಿಕರಿಗೆ ಅವಕಾಶ ಕೊಟ್ಟಲ್ಲಿ ಅನೈತಿಕ

ಚಟುವಟಿಕೆಗಳನ್ನು ತಡೆಯಬಹುದೆಂದು ಸಭೆಗೆ ತಿಳಿಸಿದಾಗ, ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಇದು ಮಾನ್ಯ ಮುಖ್ಯ ಆಯುಕ್ತರ ಆದೇಶವಾಗಿರುತ್ತದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.

8) ಅರಣ್ಯ ವಿಭಾಗ:-

**ಶ್ರೀ ಸುಬ್ರಮಣಿ, ಸ್ಥಳೀಯರು ರವರು ಮಾತನಾಡಿ** ಹೆಚ್.ಆರ್.ಬಿ.ಆರ್ ಬಡಾವಣೆ, 3ನೇ ಬ್ಲಾಕ್ ನಲ್ಲಿ ಹಲವು ಕಡೆ ಮರಗಳ ಟ್ರಿಮ್ಮಿಂಗ್ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸಿದಾಗ, ಈ ಬಗ್ಗೆ ಚರ್ಚಿಸಲಾಗಿ, ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅರಣ್ಯಾಧಿಕಾರಿಗಳಿಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು.

9) ಪಶುಸಂಗೋಪನೆ ವಿಭಾಗ:- ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಅವುಗಳನ್ನು ನಿಯಂತ್ರಿಸುವ ಬಗ್ಗೆ ಸಭೆಗೆ ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರಿಗೆ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿ, ಕೂಡಲೇ ಕ್ರಮ ಕೈಗೊಳ್ಳುವಂತೆ ಆದೇಶಿಸಿದರು. ನಂತರ ಆರೋಗ್ಯ ನಿರೀಕ್ಷಕರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಅನಧಿಕೃತ ಮಾಂಸ ಮಾರಾಟ ಅಂಗಡಿಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

10) ನೀರು ಸರಬರಾಜು:- ಯಾವುದೇ ನೀರು ಸರಬರಾಜು ಸಮಸ್ಯೆ ಇರುವುದಿಲ್ಲ ಆದರೆ ಹಲವು ಮ್ಯಾನ್‌ಹೋಲ್‌ಗಳನ್ನು ರಸ್ತೆಯ ಮಟ್ಟಕ್ಕೆ ವಿಸ್ತರಿಸಲು ಈ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು ಅದರಂತೆ ವಾರ್ಡ್ ಪ್ರದೇಶದಲ್ಲಿ 28 ಮ್ಯಾನ್ ಹೋಲ್‌ಗಳನ್ನು ವಿಸ್ತರಿಸಿ, ಕ್ರಮ ಬದ್ದಗೊಳಿಸಲಾಗಿರುತ್ತದೆ ಎಂದು ಸದಸ್ಯರಾದ ಪಿಳ್ಳಪ್ಪ ರವರು ಸಭೆಗೆ ತಿಳಿಸಿದರು. ನಂತರ ವಿನುತಾ ರವರು ಮಾತನಾಡಿ ಬಿಡಿಎ ಬಡಾವಣೆಯಲ್ಲಿ 02 ಮ್ಯಾನ್‌ಹೋಲ್‌ಗಳನ್ನು ವಿಸ್ತರಿಸಲು ತಿಳಿಸಿದಾಗ, ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

11) ಪೊಲೀಸ್/ಸಂಚಾರ ಮತ್ತು ಕಾನೂನು ಸುವ್ಯವಸ್ಥೆ:- ಯಾವುದೇ ಸಮಸ್ಯೆ ಇರುವುದಿಲ್ಲ.

12) ಬೆಸ್ಕಾಂ ಇಲಾಖೆ :- ಯಾವುದೇ ಸಮಸ್ಯೆ ಇರುವುದಿಲ್ಲ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಪ್ರತಿಯನ್ನು

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.